# ‘ಮಿನಿ’ ಚೆಲುವೆಯ ಡ್ರೆಸ್ ಸೆನ್ಸ್



ವರ್ಷದ ಕೊನೆಗೆ ಬಾಲಿವುಡ್‌ನಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎಂಬ ಲೆಕ್ಕಾಚಾರ ಆರಂಭವಾಗಿದೆ. ಕೆಟ್ಟದಾಗಿ ಕಾಣಿಸಿಕೊಂಡವರ ಪಟ್ಟಿಯೇ ಮೊದಲು ಹೊರಬಿದ್ದಿದ್ದು. ಅದರಲ್ಲಿ ‘ಆತಿ ಕ್ಯಾ ಖಂಡಾಲಾ’ದ ಮಿನಿ ಡ್ರೆಸ್ ಚೆಲುವೆ ರಾಣಿ ಮುಖರ್ಜಿಗೂ ಒಂದು ಸ್ಥಾನ ಸಿಕ್ಕಿಬಿಟ್ಟಿದೆ. ಇತ್ತೀಚೆಗಷ್ಟೆ ವಿ.ಶಾಂತಾರಾಂ ಉತ್ತಮ ನಟಿ ಪ್ರಶಸ್ತಿ ಪಡೆದಿರುವ ರಾಣಿ ಹೀಗಾದರೂ ಸುದ್ದಿಯಲ್ಲಿರುವುದಕ್ಕೆ ಖುಷ್ ಆಗಿದ್ದಾಳೋ ಗೊತ್ತಾಗಿಲ್ಲ. ‘ದಿಲ್ ಬೋಲೆ ಹಡಿಪ್ಪಾ..’ ನಂತರ ಯಾವುದೇ ಚಿತ್ರವಿಲ್ಲದೇ ಖಾಲಿ ಕುಳಿತಿದ್ದಾಳೆ ರಾಣಿ. ಗೆಳೆಯ ಆದಿತ್ಯ ಚೋಪ್ರಾ ಸದ್ಯಕ್ಕಂತೂ ಯಾವುದೇ ಹೊಸ ಚಿತ್ರದಲ್ಲಿ ರಾಣಿಯನ್ನು ಹಾಕಿಕೊಳ್ಳುವ ಇರಾದೆ ಇಟ್ಟುಕೊಂಡಂತಿಲ್ಲ. ಹಿಂದೆ ಬಾಲಿವುಡ್ ದಿವಾ ಎಂಬ ಹೆಸರು ಗಳಿಸಿದ್ದ ಈ ಬಂಗಾಳಿ ಚೆಲುವೆ ಸುಖಾಸುಮ್ಮನೆ 32 ಹಲ್ಲುಗಳನ್ನು ತೋರಿಸಿ ಬಾಯಿ ತುಂಬ ನಕ್ಕು ಅಂದಗಾತಿ ಎನಿಸಿಕೊಂಡಾಕೆ. ಆದರೆ ಸ್ಟೈಲಿಷ್ ನಟಿ ಎಂಬ ಹೆಸರು ಮಾತ್ರ ರಾಣಿಯ ಆಜೂಬಾಜೂ ಕೂಡಾ ಸುಳಿದಿಲ್ಲ. 2009ರ ಕೆಟ್ಟ ಉಡುಪು ತೊಟ್ಟ ಸೆಲೆಬ್ರಿಟಿಗಳ ಪೈಕಿ ಮೂರನೇ ಸ್ಥಾನಕ್ಕೇ ತೃಪ್ತಿಪಟ್ಟುಕೊಂಡ ಈಕೆ ಮೊದಲ ಸ್ಥಾನವನ್ನು ಜಯಾ ಆಂಟಿಗೂ, ಎರಡನೇ ಸ್ಥಾನವನ್ನು ಶಾರುಖ್ ಪತ್ನಿ ಗೌರಿ ಖಾನ್‌ಗೂ ಬಿಟ್ಟುಕೊಟ್ಟಿದ್ದಾಳೆ.

## ಅಮೀರ್-ಶಾರುಖ್ ಭಾಯಿ-ಭಾಯಿ?



ಅಮೀರ್– ಶಾರುಖ್ ಇವರಿಬ್ಬರ ಕೋಳಿಜಗಳ ಕೊನೆಗೊಂಡಂತೆ ಕಾಣುತ್ತಿದೆ. ‘3 ಈಡಿಯಟ್ಸ್’ ಪ್ರೀಮಿಯರ್ ಪ್ರದರ್ಶನಕ್ಕೆ ಶಾರುಖ್ ಬಂದಾಗ ಹೆಚ್ಚು ಖುಷಿಯಾಗಿದ್ದು ಅಮೀರ್‌ಗಂತೆ. ಮೊದಲು ತಾನೇ ಹೋಗಿ ಶಾರುಖ್‌ನನ್ನು ಮಾತನಾಡಿಸಿ, ಫೋಟೊ ತೆಗೆಸಿಕೊಂಡವ ತಾನೇ ಸೂಪರ್ ಸ್ಟಾರ್ ಎಂದು ಘೋಷಿಸಿಕೊಂಡ ಈ ವರ್ಷಕ್ಕೊಂದು ಸಿನಿಮಾ ಕೊಡುವ ನಟನೇ. ಹಿಂದೆ ತನ್ನ ಮನೆಯ ನಾಯಿಯ ಹೆಸರು ಶಾರುಖ್ ಖಾನ್ ಎಂದು ಬ್ಲಾಗಿನಲ್ಲಿ ಬರೆದು ಕಾಲು ಕೆರೆದು ಜಗಳಕ್ಕೆ ನಿಂತಿದ್ದ ಅಮೀರ್, ಈಗ ‘ಅದು ಸುಮ್ಮೆ ತಮಾಷೆಗೆ. ನಾನೀಗ ನನ್ನ ನಾಯಿಗೆ ಶಾಕಿ ಎಂದು ಕರೆಯುತ್ತೇನೆ’ ಎಂದು ತೇಪೆ ಹಚ್ಚಲು ಯತ್ನಿಸಿದ್ದಾನೆ. ಆದರೆ ಸತ್ಯ ಏನೆಂದರೆ ಶಾರುಖ್‌ನ ಮಕ್ಕಳು ಅಮೀರ್‌ನ ಅಭಿಮಾನಿಗಳಂತೆ. ತಮ್ಮ ಅಪ್ಪನ ಬಗ್ಗೆ ಈ ರೀತಿ ಅವಮಾನ ಮಾಡಿದ್ದು ಆ ಮಕ್ಕಳಿಗೆ ನೋವಾಗಿತ್ತು. ಆದರೆ ಜಾಣ ಅಮೀರ್. ಇದೆಲ್ಲಾ ಮಾಧ್ಯಮದವರ ಕಿತಾಪತಿ ಎಂದು ಉಲ್ಟಾ ಹೊಡೆದಿದ್ದಾನೆ. ಜೊತೆಗೆ ಶಾರುಖ್‌ನ ಮಕ್ಕಳ ಕ್ಷಮೆ ಯಾಚಿಸಿ, ಅಭಿಮಾನಿಗಳ ಬಳಗ ಹೆಚ್ಚಿಸಿ ಕೊಂಡಿದ್ದಾನೆ. ‘3 ಈಡಿಯಟ್ಸ್’ ಎಂದರೆ ಮೂವರು ಖಾನ್‌ಗಳಾದ ಶಾರುಖ್, ಅಮೀರ್ ಹಾಗೂ ಸಲ್ಮಾನ್ ಎಂದು ಜೋಕ್ ಹೊಡೆದಿದ್ದ ‘ಘಜನಿ’ ನಾಯಕ, ಸಲ್ಮಾನ್ ಜೊತೆಯೂ ಕೈಕುಲುಕಲಿದ್ದಾನೆಯೇ?

## ಆಸೀನ್‌ಗೆ ಕಿಂಗ್‌ಖಾನ್ ಪಾಠ

ದಕ್ಷಿಣದ ಚೆಲುವೆ ಅಸೀನ್ ಯಾಕೋ ಮುಂಬೈನ ಗಿಜಿಗುಟ್ಟುವ ಜನಸಂದಣಿಗೆ ಹೊಂದಿಕೊಂಡಂತೆ ಕಾಣುತ್ತಿಲ್ಲ. ಈಚೆಗೆ ಮುಂಬೈ ಪೊಲೀಸ್ ದಿನಾಚರಣೆ ಸಮಾರಂಭದಲ್ಲಿ ಕಾಣಿಸಿಕೊಂಡ ಈ ‘ಘಜನಿ’ ನಾಯಕಿ ಜನರ ಮಧ್ಯೆ ಸಿಕ್ಕಿಕೊಂಡಾಗ ರಕ್ಷಣೆಗೆ ಬಂದವರು ಪೊಲೀಸ್ ಅಲ್ಲ, ಶಾರುಖ್‌ನ ಅಂಗರಕ್ಷಕರಂತೆ. ವೇದಿಕೆಯತ್ತ ನಡೆದ ಅಸೀನ್ ಮತ್ತು ಆಕೆಯ ಆಪ್ತ ಕಾರ್ಯದರ್ಶಿಯ ಸುತ್ತ ಸುಮಾರು 300 ಅಭಿಮಾನಿಗಳ ಗುಂಪು ನುಗ್ಗಿತಂತೆ. ಮೊದಮೊದಲು ಮುಂಬೈ ಅಭಿಮಾನಿಗಳ ಬಗ್ಗೆ ಖುಷ್ ಆದಳು ಅಸೀನ್. ಆ ಅಭಿಮಾನಿಗಳು ಕೈ ಕುಲುಕುವ ನೆಪದಲ್ಲಿ ನಟಿಯ ಮೈ ಸೋಕಲು ಯತ್ನಿಸಿದಾಗ ಕಂಗಾಲಾದಳಂತೆ. ಅಲ್ಲಿಯೇ ಇದ್ದ ಶಾರುಖ್ ತಕ್ಷಣ ಅಸೀನ್ ರಕ್ಷಣೆಗೆ ಧಾವಿಸಿದ. ಸುತ್ತಲೂ ಬಾಲಿವುಡ್ ಬಾದ್‌ಷಾನ ಆರು ಮಂದಿ ಅಂಗರಕ್ಷಕರು ಕೋಟೆ ಕಟ್ಟಿ ನಿಂತರಂತೆ. ಹೊರಗಡೆ ಹೋಗುವಾಗ ಒಂದಿಬ್ಬರು ಭದ್ರತಾ ಸಿಬ್ಬಂದಿ ಜೊತೆಗೇ ಹೋಗಬೇಕು ಎಂದು ಖಾನ್ ಸಾಹೇಬರು ಅಸೀನ್‌ಗೆ ಉಪದೇಶ ಕೊಟ್ಟರಂತೆ.

■ ಎಸ್. ತುಂಬೆ

